**ದಿನಾಂಕಃ  28.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

ಆರೋಪಿ ಪರ ವಕೀಲರು ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡಿರುವ ಹಣದ ಬಾಬ್ತು ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿದ್ದರಿಂದ, ಸದರಿ ಹಣವನ್ನು ಈ ಸಾಕ್ಷಿಯ ಮೂಲಕ ಗುರುತುಪಡಿಸಿಕೊಳ್ಳುವುದಿಲ್ಲ ಎಂದು ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರು ನುಡಿದಿರುತ್ತಾರೆ.

**ಪಾಟೀಸವಾಲುಃ  ಆರೋಪಿ ಪರ  ವಕೀಲರಿಂದಃ –**

ಹಿಂದಿನ ದಿನಾಂಕದಂದು ಈ ನ್ಯಾಯಾಲಯದ ಮುಂದೆ ನಾನು ಮುಖ್ಯ ವಿಚಾರಣೆಯಲ್ಲಿ ಸಾಕ್ಯೆ ನುಡಿಯುವಾಗ ನಾನು ಸಮಾಧಾನಚಿತ್ತದಿಂದ ಇದ್ದೆ ಎನ್ನುವುದು ಸರಿ. ಹೀಗಾಗಿ ನನ್ನ ಹಿಂದಿನ ಮುಖ್ಯ ವಿಚಾರಣೆಯಲ್ಲಿ ದೂರು , ಪ್ರಾಯೋಗಿಕ ಪಂಚನಾಮೆ ಮತ್ತು ಟ್ರಾಪ್ ಪಂಚನಾಮೆಯ ಬಾಬ್ತು ಕೂಲಂಕುಶವಾಗಿ ನುಡಿದಿರುತ್ತೇನೆ ಎನ್ನುವುದು ಸರಿ . ಅದಕ್ಕೂ ಮುನ್ನ ಆರೋಪಿಯ ವಿರುದ್ಧ ನಡೆದಂತಹ ಇಲಾಖಾ ವಿಚಾರಣೆಯಲ್ಲಿ ನಾನು ಎರಡು ಬಾರಿ ಸಾಕ್ಷ್ಯ ನುಡಿದಿರುತ್ತೇನೆ ಎನ್ನುವುದು ಸರಿ . ಮೊದಲ ಬಾರಿ ನಾನು ಈ ಪ್ರಕರಣದಲ್ಲಿ ಏನು ನಡೆದಿತ್ತೋ ಅದನ್ನೇ ನುಡಿದಿದ್ದೆ ಎನ್ನುವುದು ಸರಿ . 2 ನೇ ಬಾರಿ ವಿಚಾರಣೆ ಮಾಡಿದಾಗ , ಆರೋಪಿ ಪರ ವಕೀಲರು ನನ್ನನ್ನು ವಿಚಾರಣೆಗೆ ಒಳಪಡಿಸಿದ್ದರು ಎನ್ನುವುದು ಸರಿ. ಆಗ ನಾನು ಸಾಕ್ಷ್ಯ ನುಡಿಯುವಾಗ Confusion ನಲ್ಲಿದ್ದೆ. ಈ Confusion ಬಗ್ಗೆ ವಿಚಾರಣಾಧಿಕಾರಿ ಯವರ ಮುಂದೆ ತಿಳಿಸಿದ್ದಿರಾ ಅಥವಾ

ಬರವಣಿಗೆಯಲ್ಲಿ ತಿಳಿಸಿದಿರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , ನಾನು ಹೊರಗೆ ಬಂದ ನಂತರ ನನ್ನ confusion ಬಗ್ಗೆ ಗೊತ್ತಾಯಿತು, ಎನ್ನುತ್ತಾರೆ. ಈ ಬಗ್ಗೆ ನಾನು ಇಲ್ಲಿಯವರೆಗೂ ಎಸಿಬಿ ಅಧಿಕಾರಿಯವರಿಗಾಗಲೀ, ವಿಚಾರಣಾಧಿಕಾರಿಯವರಿಗಾಗಲೀ, ನಾನು ಗೊಂದಲಕ್ಕೀಡಾಗಿದ್ದೆ ಎಂದು ಬರವಣಿಗೆ ಮಾಲಕ ತಿಳಿಸಿರುವುದಿಲ್ಲ.

2. ನಾನು ಎಸಿಬಿ ಕಛೇರಿಗೆ ಒಟ್ಟು 3 ದಿನ ಹೋಗಿದ್ದೆ. ಈ ನ್ಯಾಯಾಲಯಕ್ಕೆ ನಾನು ಇಂದು 2 ನೇ ಬಾರಿ ಬರುತ್ತಿದ್ದೇನೆ. ಎಸಿಬಿ ಕಛೇರಿಗೆ ನಾನು ಹೋದದ್ದು , ಈ ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯುತ್ತಿರುವುದು ನಾನು ಕರ್ತವ್ಯದ ಮೇಲೆ ಎನ್ನುವುದು ಸರಿ. ಎಸಿಬಿ ಅಧಿಕಾರಿಗಳು ತಯಾರಿಸಿದ ದಾಖಲಾತಿಗಳಿಗೆ ವಿರುದ್ದವಾಗಿ ಸಾಕ್ಷ್ಯ ನುಡಿದಲ್ಲಿ, ನನ್ನ ವಿರುದ್ಧ ಇಲಾಖಾ ವಿಚಾರಣೆ ಮಾಡುವ ಸಾಧ್ಯತೆ ಇರುತ್ತದೆ , ಎನ್ನುವ ಬಗ್ಗೆ ನನಗೆ ಗೊತ್ತು. ಎಸಿಬಿ ಅಧಿಕಾರಿ ನನ್ನಿಂದ , ದಾಖಲಾತಿಗಳಂತೆ ನಾನು ಸಾಕ್ಷ್ಯ ನುಡಿಯಲು ಬದ್ಧನಾಗಿರುತ್ತೇನೆ , ಇಲ್ಲವಾದಲ್ಲಿ ಸರ್ಕಾರ ಅಥವಾ ನ್ಯಾಯಾಲಯ ವಿಧಿಸುವ ದಂಡ ಪಾವತಿಸಲು ಬದ್ದನಾಗಿರುತ್ತೇನೆ ಎಂದು ಬರೆಯಿಸಿಕೊಂಡಿರುತ್ತಾರೆ ಎನ್ನುವುದು ಸರಿಯಲ್ಲ. ಈಗ ತೋರಿಸುತ್ತಿರುವ ದಾಖಲಾತಿಯ ಮೇಲೆ ನನ್ನ ಸಹಿ ಇರುತ್ತದೆ ಎನ್ನುವುದು ಸರಿ . ಸದರಿ ದಾಖಾತಿಯನ್ನು ನಿಡಿ 5 ಎಂತಲು, ಅದರ ಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಡಿ 5(ಎ) ಎಂತಲು ಗುರುತುಪಡಿಸಿಕೊಳ್ಳಲಾಯಿತು. ಈ ನಿಡಿ 5 ರಂತೆ ಬರೆಯಿಸಿಕೊಂಡಿರುವುದರಿಂದ ಮತ್ತು ಎಸಿಬಿ ಅಧಿಕಾರಿಗಳು ಹೇಳಿರುವುದರಿಂದ, ನಾನು ಸಾಕ್ಷ್ಯವನ್ನು ಗಿಳಿ ಪಾಠ ಮಾಡಿಕೊಂಡು ಬಂದು ಮುಖ್ಯ ವಿಚಾರಣೆಯಲ್ಲಿ ನುಡಿದಿರುತ್ತೇನೆ ಎನ್ನುವುದು ಸರಿಯಲ್ಲ.

3. ಎಲ್ಲೆಲ್ಲಿ ಮಹಜರ್ ಗಳನ್ನು ಮಾಡಲಾಗಿರುತ್ತದೋ, ಅಲ್ಲೆಲ್ಲ ನಾನು ಸಹಿ ಹಾಕಿರುತ್ತೇನೆ. ಮಹಜರ್ ಗಳನ್ನು ಹೊರತು ಪಡಿಸಿ , ಆರೋಪಿಯನ್ನು ದಸ್ತಗಿರಿ ಮಾಡಿದ ನಂತರ, ಪಿಡಿಒ ರವರಿಂದ ತರಿಸಿಕೊಂಡ ದಾಖಲಾತಿಗಳಿಗೂ ಸಹ ನನ್ನ ಸಹಿಯನ್ನು ಪಡೆದಿದ್ದಾರೆ. ದಾಖಲಾತಿಗಳನ್ನು ಪರಿಶೀಲಿಸಿದಾಗ ಅವುಗಳಲ್ಲಿ ತಪ್ಪುಗಳು ಕಂಡು ಬಂದಲ್ಲಿ ನಾನು ಪ್ರಶ್ನಿಸಿರುವುದಿಲ್ಲ. ದೂರುದಾರರಾದ ಶೀಲಾವತಿಯವರು ಆ ಗ್ರಾಮ ಪಂಚಾಯ್ತಿಯಿಂದ ತಮ್ಮ ಸ್ವತ್ತಿನ ನಮೂನೆ 11 ಬಿ ಯನ್ನು ಪಡೆಯುವ ಸಲುವಾಗಿ ಅರ್ಜಿಯನ್ನು ನೀಡಿದ್ದರು. ಫೆಬ್ರವರಿ ತಿಂಗಳ 2018 ರಲ್ಲಿ ಆ ಅರ್ಜಿಯನ್ನು ಅವರು ನೀಡಿದ್ದರು. ಆ ಸಮಯದಲ್ಲಿ ಆ ಅರ್ಜಿಯನ್ನು ನನಗೆ ತೋರಿಸಿದ್ದರು. ನಾನು ನೋಡಿದ್ದೆ. ಈಗ ನೋಡುತ್ತಿರುವ ನಿಡಿ 1 ಅದೇ ದಾಖಲಾತಿಯಾಗಿರುತ್ತದೆ. ಅದರ ಮೇಲೆ ನನ್ನ ಸಹಿ ಇರುತ್ತದೆ. ಆ ಸಹಿಯನ್ನು ನಾನು ದಿಃ 06.09.2018 ರಂದು ಹಾಕಿರುತ್ತೇನೆ. ನಿಡಿ 1 ರಲ್ಲಿ , ಅರ್ಜಿಯನ್ನು ಫೆಬ್ರವರಿ 2018 ರಂದು ನೀಡಿರುವ ಬಗ್ಗೆ ಕಂಡು ಬರುವುದಿಲ್ಲ. ನಿಡಿ 1 ರಲ್ಲಿ ಸದರಿ ಅರ್ಜಿಯನ್ನು ದಿಃ 21.08.2018 ರಂದು ಪಡೆದಿರುವ ಬಾಬ್ತು ಸೀಲು ಮಾಡಲಾಗಿದೆ ಎನ್ನುವುದು ಸರಿ. ಟ್ರ್ಯಾಪ್ ಮಾಡುವ 16 ದಿನಗಳ ಮುಂಚೆ ಈ ಅರ್ಜಿಯನ್ನು ಕೊಡಲಾಗಿದೆ ಎಂದು ಮಾಡಿದ ಸಲಹೆಗೆ ಸಾಕ್ಷಿ , ಈ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

4. ದೂರಿನಲ್ಲಿ ದೂರುದಾರಳು, 6 ತಿಂಗಳ ಮುಂಚೆ ಅರ್ಜಿಯನ್ನು ನೀಡಿದ್ದೆ ಎಂದು ತಿಳಿಸಿರುತ್ತಾರೆ ಎನ್ನುವುದು ಸರಿ. ನಿಡಿ 1 ರಂತೆ ಅರ್ಜಿಯನ್ನು ಆಗಸ್ಟ್ ತಿಂಗಳಿನಲ್ಲಿ ನೀಡಿರುವುದು ಕಂಡು ಬರುತ್ತದೆ ಎನ್ನುವುದು ಸರಿ. ನಿಡಿ 1 ದಾಖಲಾತಿಯನ್ನು ಪರಿಶೀಲಿಸಿಯೇ ನಾನು ಸಹಿ ಹಾಕಿರುತ್ತೇನೆ. ಈ ಬಗ್ಗೆ ಅಂದರೆ 6 ತಿಂಗಳ ಮುಂಚೆ ಅರ್ಜಿಯನ್ನು ನೀಡಿದ್ದೆ ಎಂದು ದೂರಿನಲ್ಲಿ

ತಿಳಿಸಿರುವ ಬಾಬ್ತು ಮತ್ತು ನಿಡಿ 1 ರಲ್ಲಿ ಕೇವಲ 16 ದಿನಗಳ ಮುಂಚೆ ಅರ್ಜಿಯನ್ನು ನೀಡಿರುವ ಬಾಬ್ತು , ಫಿರ್ಯಾದುದಾರರಲ್ಲಿ ಏಕೆ ಹೀಗೆ ಎಂದು ನಾನು ಕೇಳಿರುವುದಿಲ್ಲ. ಈ ಬಗ್ಗೆ ತನಿಖಾಧಿಕಾರಿಯಲ್ಲಿಯೂ ಸಹ ನಾನು ಪ್ರಶ್ನಿಸಿರುವುದಿಲ್ಲ. ಎಸಿಬಿ ಅಧಿಕಾರಿ ಮತ್ತು ಸಿಬ್ಬಂದಿಯವರೊಂದಿಗೆ ಇದ್ದಾಗ ನಾನು ಕೇವಲ ರಬ್ಬರ್ ಸ್ಟಾಂಪ್ ಆಗಿ ಸಹಿಗಳನ್ನು ಹಾಕಿರುತ್ತೇನೆಯೇ ಹೊರತು, ಸ್ವತಂತ್ರವಾಗಿ ನಾನು ವಿವೇಚಿಸಿ, ಯಾವುದಕ್ಕೂ ಸಹಿ ಹಾಕಿರುವುದಿಲ್ಲ ಮತ್ತು ಪ್ರಶ್ನಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ದೂರಿನ ಪುಟ ಸಂಖ್ಯೆ 2 ರಲ್ಲಿ , "ಮೇಲ್ಕಂಡ ಸಂಭಾಷಣೆಯನ್ನು ನಾನು ನನ್ನ ಬಳಿ ಇದ್ದ ಮೊಬೈಲ್ ನ ಕ್ಯಾಮರಾದಲ್ಲಿ ರೆಕಾರ್ಡ ಮಾಡಿಕೊಂಡಿರುತ್ತೇನೆ " ಎಂದಿರುತ್ತದೆ ಎನ್ನುವುದು ಸರಿ. ದೂರಿನ ಪುಟ ಸಂಖ್ಯೆ 2 ರ ಮೊದಲನೇ ಪ್ಯಾರಾದಲ್ಲಿ ಇರುವಂತಹ 'ನಾನು ಮಾರಪ್ಪ , ಸೆಕ್ರೇಟರಿ' , '11 ಬಿ ಯನ್ನು ಕೊಡಿಸಿಕೊಡುವಂತೆ', 'ಅದಕ್ಕೆಲ್ಲಾ ಬೇರೆಯವರಿಗೆ ದುಡ್ಡು ಕೊಡಬೇಕು , ಸುಮಾರು ಹದಿನೈದು ಸಾವಿರ ಆಗುತ್ತದೆ ', 'ಪಂಚಾಯ್ತಿಯವರಿಗೆ ಕೊಟ್ಟು ಕೆಲಸ ಮಾಡಿಸಬೇಕು ', 'ಅಷ್ಟು ಕೊಡೋಕ್ಕಾಗೋಲ್ಲಾ , ನಾನು ಬಡವಳು ', 'ಕೊನೆಗೆ ಹನ್ನೆರಡು ಸಾವಿರ ರೂಗಳನ್ನಾದರು ಕೊಡಿ ', ಈ ಸಂಭಾಷಣೆ ನನಗೆ ಕೇಳಿಸಿದ ಚಿಪ್ಪಿನಿಂದ ವರ್ಗಾವಣೆ ಮಾಡಿದ ಪ್ರಾಯೋಗಿಕ ಪಂಚನಾಮೆಯಲ್ಲಿ ಅಡಕವಾಗಿರುವ ಧ್ವನಿ ಮುದ್ರಣದಲ್ಲಿ ಇತ್ತು. ಈ ಮೇಲ್ಕಂಡ ಸಂಭಾಷಣೆಯ ಮಾತುಗಳು ಧ್ವನಿ ಮುದ್ರಣದಲ್ಲಿ ಇರದಿದ್ದರೂ ಸಹ ತನಿಹಾಧಿಕಾರಿಯ ಮಾತನ್ನು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆ ಸಂಭಾಷಣೆಯಲ್ಲಿ , ಟ್ಯಾಕ್ಸ್ ಪಾವತಿಯ ಬಾಬ್ತು ಸಹ ಮಾತುಕತೆ ಇತ್ತು. ಆ ಮೊಬೈಲ್ ಚಿಪ್ಪನಲ್ಲಿದ್ದ ಸಂಭಾಷಣೆಯನ್ನು ಲ್ಯಾಪ್ ಟಾಪ್ ಮೂಲಕ ವರ್ಗಾವಣೆ ಮಾಡಿದರು ಎಸಿಬಿ ಸಿಬ್ಬಂದಿ. ಅವರ ಹೆಸರು ನೆನಪಿಲ್ಲ. ಆ ಮೊಬೈಲ್ ಚಿಪ್ಪ ಯಾವ

ಕಂಪನಿಗೆ ಸೇರಿದ್ದು , ಎಷ್ಟು ಕೆಪ್ಯಾಸಿಟಿಯದ್ದು ಎನ್ನುವುದು ನನಗೆ ಗೊತ್ತಿಲ್ಲ. ಅಲ್ಲಿ ತೆಗೆದ ಪೋಟೋಗಳನ್ನು ಕ್ಯಾಮರಾದಲ್ಲಿ ಎಸಿಬಿ ಸಿಬ್ಬಂದಿ ತೆಗೆಯುತ್ತಿದ್ದರು. ನಾವುಗಳು ಮತ್ತು ಎಸಿಬಿ ಸಿಬ್ಬಂದಿಯವರು ಕೈತೊಳೆದುಕೊಳ್ಳುತ್ತಿರುವುದನ್ನು ಪೋಟೋ ತೆಗೆದಿರುವುದಿಲ್ಲ.

5. ಈ ಪ್ರಕರಣದಲ್ಲಿ ಒಟ್ಟು 3 ಮಹಜರ್ ಗಳನ್ನು ಮಾಡಲಾಗಿರುತ್ತದೆ. ಸದರಿ ಮಹಜರ್ ಗಳಲ್ಲಿರುವ ವಿಷಯಗಳನ್ನು ನಾನಾಗಲೀ, ಶ್ರೀಪತಿಯವರಾಗಲೀ ಉಕ್ತಲೇಖನ ನೀಡಿ ಮಾಡಿಸಿರುವುದಿಲ್ಲ. ನಾನು ಯಾವ ಮಹಜರ್ ನ್ನು ಸಹ ಓದಿ ಸಹಿ ಮಾಡಿರುವುದಿಲ್ಲ ಎನ್ನುವುದು ಸರಿಯಲ್ಲ. ಆದ್ದರಿಂದ ಸದರಿ ಮಹಜರ್ ಗಳಲ್ಲಿ ನಾನು ಮತ್ತು ಶ್ರೀಪತಿಯವರು ಉಕ್ತಲೇಖನ ನೀಡಿ ಬರೆಸಿದಂತೆ ಇದೆ ಎಂದಿರುವ ವಿಷಯ ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ.

6. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ , "ಸದರಿ ನೋಟುಗಳನ್ನು ದೂರುದಾರರ ಪರ್ಸಿನಲ್ಲಿ ಇಡಲು ಹೇಳಿದ್ದು , ಅದರಂತೆ ಚಾ,ಸಾ. 2 ರವರು ದೂರುದಾರರ ಪರ್ಸಿನಲ್ಲಿ ಇಟ್ಟರು. ಆ ಪರ್ಸಿನಲ್ಲಿ ಆ ಹಣವನ್ನು ಇಡುವ ಮೊದಲು ಅದರಲ್ಲಿ ಬೇರೆ ಯಾವುದೇ ಹಣ ಇರುವುದಿಲ್ಲ ಎನ್ನುವುದನ್ನು ತನಿಖಾಧಿಕಾರಿಯವರು ಖಚಿತ ಪಡಿಸಿಕೊಂಡರು " , ಇದನ್ನು ಪ್ರಾಯೋಗಿಕ ಪಂಚನಾಮೆಯಲ್ಲಿಯೂ ಸಹ ನಮೂದಿಸಲಾಗಿದೆ. 7 ನೇ ತಾರೀಖಿನಂದು ನನ್ನನ್ನು ಎಸಿಬಿ ಕಛೇರಿಗೆ ಕರೆಸಿ ನನ್ನ ಹೇಳಿಕೆಯನ್ನು ಪಡೆದುಕೊಂಡರು. ನನ್ನ ಹೇಳಿಕೆಯಲ್ಲಿ ಮೇಲಿನ ವಿಷಯವನ್ನು ಹೇಳಿರುತ್ತೇನೆ. ಈ ಮೇಲ್ಕಂಡ ವಿಷಯದ ಬಗ್ಗೆ ನಾನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ ಮತ್ತು ಇದನ್ನು ಪ್ರಾಯೋಗಿಕ ಪಂಚನಾಮೆಯಲ್ಲಿಯೂ ಸಹ ನಮೂದಿಸಿರುವುದಿಲ್ಲ ಎನ್ನುವುದು ಸರಿಯಲ್ಲ.

7. ಸಂಭಾಷಣೆಯನ್ನು ಸಿಡಿಗೆ ವರ್ಗಾವಣೆ ಮಾಡುವ ಮೊದಲು , ಆ ಸಿಡಿಯಲ್ಲಿ ಬೇರೆ ಏನಾದರು ರೆಕಾರ್ಡ ಆಗಿದೆಯೋ , ಇಲ್ಲವೋ, ಎನ್ನುವ ಬಗ್ಗೆ ಪ್ರಾಯೋಗಿಕ ಪಂಚನಾಮೆಯಲ್ಲಿ ನಮೂದಿಸಿರುತ್ತಾರೋ , ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಪ್ರಾಯೋಗಿಕ ಪಂಚನಾಮೆಯ ಕಾಲಕ್ಕೆ ಮೊಬೈಲ್ ಚಿಪ್ಪಿನಿಂದ ಲ್ಯಾಪ್ ಟಾಪ್ ಗೆ , ಲ್ಯಾಪ್ ಟಾಪ್ ನಿಂದ ಸಿಡಿಗೆ ಸಂಭಾಷಣೆಯನ್ನು ವರ್ಗಾವಣೆ ಮಾಡಿರುವುದಿಲ್ಲ ಎನ್ನುವುದು ಸರಿಯಲ್ಲ. ಪ್ರಾಯೋಗಿಕ ಪಂಚನಾಮೆನ್ನು ಪ್ರಕರಣಕ್ಕೆ ಹೇಗೆ ಬೇಕೋ ಹಾಗೆ ಬರೆದುಕೊಂಡು ನನ್ನ ಸಹಿಯನ್ನು ಪಡೆದುಕೂಂಡಿರುತ್ತಾರೆ ಎನ್ನುವುದು ಸರಿಯಲ್ಲ. ಆದ್ದರಿಂದಲೇ, ಪ್ರಾಯೋಗಿಕ ಪಂಚನಾಮೆಯಲ್ಲಿ ಏನನ್ನು ನಮೂದಿಸಲಾಗಿದೆ ಎಂದು ಸ್ಪಷ್ಟವಾಗಿ ಹೇಳಲು ಆಗುತ್ತಿಲ್ಲ ಎನ್ನುವುದು ಸರಿಯಲ್ಲ.

8. ನಿಪಿ 10 ಮಹಜರ್ ಮಾಡುವಾಗ ದಾಖಲಿಸಿಕೊಂಡ ಸಂಭಾಷಣೆಯಲ್ಲಿ ಆರೋಪಿ ಹಣದ ಬಗ್ಗೆ ಮಾತನಾಡಿದ ಬಾಬ್ತು ನಮೂದು ಇರುವುದಿಲ್ಲ. ಮರು ದಿನ ಪುನಃ ಹಣವನ್ನು ಪಂಚ ಸಾಕ್ಷಿ 1 ರವರ ಕೈಯಲ್ಲಿ ಕೊಟ್ಟು ಎಣಿಸಿ ಈಗಾಗಲೇ ದಾಖಲಿಸಿಕೂಂಡಿದ್ದ ಪ್ರತ್ಯೇಕ ಹಾಳೆಯಲ್ಲಿ ನಮೂದಿಸಿಕೊಂಡಿದ್ದ ಸಂಖ್ಯೆಗಳೊಂದಿಗೆ ತಾಳೆಯಾಗುತ್ತದೆಯಾ ಇಲ್ಲವೋ ಎಂದು ನೋಡಿಕೊಂಡೆವು. ನಂತರ ಪಂಚ ಸಾಕ್ಷಿ 1 ರವರ ಕೈಗಳನ್ನು ಫಿನಾಫ್ತಲೀನ್ ಪೌಡರ್ ನಲ್ಲಿ ತೊಳೆಸಿರುವುದಿಲ್ಲ. ಆದರೆ ನೀರಿನಲ್ಲಿ ತೊಳೆಸಿದರು.

9. ಟ್ರಾಪ್ ಮಹಜರ್ ನಲ್ಲಿ , "ನಾನು ಅದೇ ರೂಂನಲ್ಲಿ ಅವರಿಬ್ಬರು ಕಾಣಿಸುವಷ್ಟ ಅಂತರದಲ್ಲಿ ನಿಂತಿದ್ದೆ " ಎನ್ನುವ ವಿಷಯವನ್ನು ಹೇಳಿ ಬರೆಸಿರುತ್ತೇನೆ. ಇದನ್ನು ನನ್ನ ಹೇಳಿಕೆಯಲ್ಲಿಯೂ ಸಹ ಹೇಳಿರುತೆತೇನೆ. ಈವಿಷಯವನ್ನು ಟ್ರಾಪ್ ಮಹಜರ್ ನಲ್ಲಿ ಬರೆದಿರುವುದಿಲ್ಲ ಎನ್ನುವುದು ಸರಿಯಲ್ಲ. ಇದನ್ನು ನನ್ನ ಹೇಳಿಕೆಯೂ ಸಹ ಹೇಳಿರುವುದಿಲ್ಲ

ಮ್ನವುದು ಸರಿಯಲ್ಲ. ಆರೋಪಿ ಕೈನಲ್ಲಿ ದೂರುದಾರಳಿಗೆ ಸನ್ನೆ ಮಾಡಿದರು ಎನ್ನುವ ಬಗ್ಗೆ ಟ್ರಾಪ್ ಮಹಜರ್ ನಲ್ಲಿ ಬರೆದಿರುತ್ತಾರೆ. ಆದರೆ ಯಾವ ರೀತಿ ಸನ್ನೆ ಮಾಡಿದರು ಎಂಬುದನ್ನು ಬರೆದಿರುವುದಿಲ್ಲ. ನನ್ನ ಹೇಳಿಕೆಯಲ್ಲಿ ಆರೋಪಿ ಹಣಕ್ಕಾಗಿ ಕೈ ಚಾಚಿದರು ಎಂದು ಹೇಳಿರುತ್ತೇನೆ. ಆ ರೀತಿ ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ ಎನ್ನುವುದು ಸರಿಯಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಅಲ್ಲಿ ಆರೋಪಿಯ ಕೈಗಳನ್ನು ತೊಳೆಸಿರುವುದಿಲ್ಲ , ಪ್ಯಾಂಟ್ ಜೇಬನ್ನು ತೊಳೆಸಿರುವುದಿಲ್ಲ ಎನ್ನುವುದು ಸರಿಯಲ್ಲ. ಅಲ್ಲಿ ದೂರುದಾರರು , ನಾನು ಟ್ಯಾಕ್ಸ್ ಹಣವನ್ನು ಆರೋಪಿಗೆ ಕೊಟ್ಟಿರುತ್ತೇನೆ ಎಂದು ತಿಳಿಸಿದ್ದರು ಎನ್ನುವುದು ಸರಿಯಲ್ಲ. ಆರೋಪಿ ಸಹ ನಾನು ಟ್ಯಾಕ್ಸ್ ಹಣವನ್ನು ದೂರುದಾರರಿಂದ ಪಡೆದಿರುತ್ತೇನೆ ಎಂದು ತಿಳಿಸಿದ್ದರು ಎನ್ನುವುದು ಸರಿಯಲ್ಲ. ಆರೋಪಿ ಬರೆದುಕೊಟ್ಟ ಲಿಖಿತ ಸಮಜಾಯಿಶಿಯನ್ನು ನಾನು ಓದಿ ಸಹಿ ಹಾಕಿರುತ್ತೇನೆ. ಕಂದಾಯದ ಹಣವನ್ನು ಪಡೆದಿರುತ್ತೇನೆ ಎಂದು ಆರೋಪಿ ಬರೆದುಕೊಟ್ಟದ್ದರು ಎನ್ನುವುದು ಸರಿ. ಅಲ್ಲಿ ದಾಖಲಾತಿಗಳನ್ನು ಪರಿಶೀಲಿಸುವಾಗ, ದೂರುದಾರರು ಕಂದಾಯದ ಹಣವನ್ನು ಕಟ್ಟಿರುತ್ತಾರೋ ಇಲ್ಲವೋ ಎಂದು ನೀವು ಪರಿಶೀಲಿಸಿದಿರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ , ಆ ದಿನ ದೂರುದಾರರು ಕೊಟ್ಟ ಹಣವೇ ಕಂದಾಯದ ಹಣ ಎನ್ನುತ್ತಾರೆ. ಟ್ರಾಪ್ ಮಹಜರ್ ನಲ್ಲಿ ಬರೆದಿರುವ ವಿಷಯಗಳನ್ನು ತಿಳಿದು ಕೊಳ್ಳದೇ ಸಹಿ ಹಾಕಿರುತ್ತೇನೆ ಎನ್ನುವುದು ಸರಿಯಲಲ.

10. ಈ ಪ್ರಕರಣದಲ್ಲಿ ಪಿಡಬ್ಲೂ ಡಿ ಇಂಜಿನಿಯರ್ ರವರು ನಕಾಶೆ ತಯಾರಿಸುವ ಕಾಲಕ್ಷ ನಾನು ಸ್ಥಳವನ್ನು ತೋರಿಸಿದ್ದೆ ಎನ್ನುವುದು ಸರಿ . ಆ ನೆಲ ಮಹಡಿಯಲ್ಲಿ ಮೊದಲು ಹೋದಾಗ ಎಡ ಭಾಗದಲ್ಲಿ ಮತ್ತು ಬಲ ಭಾಗದಲ್ಲಿ ಒಂದೊಂದು ರೂಂಗಳು ಇವೆ. ಮಧ್ಯದಲ್ಲಿ ವರಾಂಡಾ ಇದೆ. ಬಲ ಭಾಗದಲ್ಲಿ ಕಾರ್ಯದರ್ಶಿ ಕುಳಿತುಕೊಳ್ಳುತ್ತಿದ್ದರು. ಎಡ ಭಾಗದಲ್ಲಿ ಇದ್ದ

ರೂಂ ಕಂಪ್ಯೂಟರ್ ರೂಂ ಆಗಿತು. ನಾವು ಹೋದಾಗ ಆರೋಪಿ ಎಡ ಭಾಗದ ರೂಂನಲ್ಲಿ ಇದ್ದರು. ಆರೋಪಿ ಅದೇ ರೂಂನಲ್ಲಿ ಇದ್ದರು. ದೂರುದಾರರು ಆ ರೂಂಗೆ ಹೋದಾಗ ಆರೋಪಿ ಆ ಕಂಪ್ಯೂಟರ್ ರೂಂನಲ್ಲಿ ಇದ್ದಂತಹ ಚೇರ್ ನಲ್ಲಿ ಕುಳಿತಿದ್ದರು. ಫಿರ್ಯಾದುದಾರಳನ್ನು ನೋಡಿ ಆರೋಪಿ , ಆ ರೂಂಗೆ ನಡೆಯಿರಿ ಎಂದರು. ಅಂದರೆ ಅದು ಕಾರ್ಯದರ್ಶಿಯ ರೂಂ ಆಗಿತ್ತು. ಪುನಃ ದೂರುದಾರರು ಆ ಕಂಪ್ಯೂಟರ್ ರೂಂಗೆ ಬಂದರು. ಆಗ ಆರೋಪಿಯು ಸಹ ಕಂಪ್ಯೂಟರ್ ರೂಂನಲ್ಲಿ ಇದ್ದರು. ಮೊದಲು ದೂರುದಾರರು ನಿಂತಿದ್ದರು. ನಂತರ ಚೇರ್ ನಲ್ಲಿ ಕುಳಿತುಕೊಂಡರು. ಆಗ ಆರೋಪಿ ಸಹ ಚೇರ್ ನಲ್ಲಿ ಕುಳಿತಿದ್ದರು. ಆ ಕಂಪ್ಯೂಟರ್ ರೂಂ ಮತ್ತು ಕಾರ್ಯದರ್ಶಿಯ ರೂಂಗಳಿಗೆ ಒಂದೊಂದೇ ಬಾಗಿಲು ಇದ್ದವು ಎನ್ನುವುದು ಸರಿ . ಆ ರೂಂಗಳಲ್ಲಿ ನಡೆಯುತ್ತಿದ್ದ ದೃಶ್ಯವನ್ನು ಆ ರೂಂಗಳ ಬಾಗಿಲುಗಳಿಂದಲೇ ನೋಡಬೇಕು ಎನ್ನುವುದು ಸರಿ. ನಕಾಶೆ ಮಾಡಲು ಬಂದ ಪಿಡಬ್ಲ್ಯೂಡಿ ಇಂಜಿನಿಯರ್ ರವರಿಗೆ ನಾನು ಯಾವ ಜಾಗದಲ್ಲಿ ನಿಂತಿದ್ದೆ ಎಂದು ತೋರಿಸಿರುತ್ತೇನೆ. ಆ ಎರಡೂ ರೂಂಗಳಿಗೆ ಕಿಟಕಿಗಳು ಇದ್ದವು. ವರಾಂಡಾ ಕಡೆಗೆ ಕಿಟಕಿಗಳು ಇರುವುದಿಲ್ಲ. ಅವರು ತಯಾರಿಸಿದ ನಕಾಶೆಯ ಪ್ರಕಾರ ನಾನು P2 ಎಂದು ತೋರಿಸಿರುವ ಜಾಗದಲ್ಲಿ ನಿಂತಿದ್ದೆ. ಆ ಜಾಗದಿಂದ ಒಳಗಡೆ ಏನು ನಡೆಯುತ್ತಿತ್ತು ಅದು ಕಾಣುತ್ತಿರಲಿಲ್ಲ ಎನ್ನುವುದು ಸರಿಯಲ್ಲ. P2 ಜಾಗವನ್ನು ಹೊರತು ಪಡಿಸಿ, ನಾನು ಬೇರೆ ಎಲ್ಲಿಯೂ ನಿಂತ ಬಗ್ಗೆ ಈ ನಕಾಶೆಯಲ್ಲಿ ತೋರಿಸಿರುವುದಿಲ್ಲ ಎನ್ನುವುದು ಸರಿ. ನಾನು ಆ ದಿನ ಅಲ್ಲಿ ಏನನ್ನು ನೋಡಿರುವುದಿಲ್ಲ ಎನ್ನುವುದು ಸರಿಯಲ್ಲ. ಅಲ್ಲಿ ಯಾವುದೇ ಫೋಟೋಗಳನ್ನು ಸಹ ತೆಗೆದಿರುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ 20 ರಂತೆ ನನ್ನ ಸಮಕ್ಷಮ ಯಾವುದೇ ಮಹಜರ್ ನ್ನು ಮಾಡಿರುವುದಿಲ್ಲ ಎನ್ನುವುದು ಸರಿಯಲ್ಲ. ಯಾವುದೇ ವಾಯ್ಸು ರೆಕಾರ್ಡರ್ ನ್ನು

ಫಿರ್ಯಾದುದಾರರಿಗೆ ಕೊಟ್ಟಿರಲಿಲ್ಲ ಎನ್ನುವುದು ಸರಿಯಲ್ಲ. ಆಕೆ ಯಾವುದೇ ಸಂಭಾಷಣೆಯನ್ನು ದಾಖಲಿಸಿಕೊಂಡಿರಲಿಲ್ಲ ಎನ್ನುವುದು ಸರಿಯಲ್ಲ. ಆರೋಪಿಯ ಕಛೇರಿಯಲ್ಲಿ ನಡೆದ ಪ್ರಕ್ರಿಯಗಳ ಬಾಬ್ತು ನಾನು ಅಲ್ಲಿ ಭಾಗವಹಿಸಿರಲಿಲ್ಲ ಎನ್ನುವುದು ಸರಿಯಲ್ಲ. ಆ ಕಂಪ್ಯೂಟರ್ ರೂಂ ನ ಅಳತೆ 10 X 10 ಇದ್ದಿರಬಹುದು. ಅದರಲ್ಲಿ ಕಂಪೂಟರ್ , ಟೇಬಲ್ , ಚೇರ್ ಗಳು , ಅಲ್ಮೇರಾ ಇದ್ದವು ಎನ್ನುವುದು ಸರಿ. ಅಲ್ಲಿ ಎರಡು ಚೇರ್ ಗಳು, ಒಂದು ಟೇಲ್ ಇದ್ದಿರಬಹುದು, ಸರಿಯಾಗಿ ನೆನಪಿಲ್ಲ. ಅಲ್ಲಿ ಮೂವರು ಎಸಿಬಿ ಸಿಬ್ಬಂದಿ ಇದ್ದರು. ಆರೋಪಿ ಕಛೇರಿಗೆ ಸಂಬಂಧಪಟ್ಟಂತೆ ಪಿಡಿಒ ರವರನ್ನು ನಂತರದಲ್ಲಿ ಕರೆಸಿದರು. ಆ ಕೊಠಡಿಯಲ್ಲಿ 4–5 ಕ್ಕಿಂತ ಹೆಚ್ಚು ಜನ ನಿಂತು ಕೊಳ್ಳಲು ಸಹ ಆಗುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ಅಲ್ಲಿ ತೆಗೆದಂತಹ ಪೋಟೋಗಳು ಆರೋಪಿಯ ಕಛೇರಿಗೆ ಸಂಬಂಧಪಟ್ಟ ಪೋಟೋಗಳು ಆಗಿರಲಿಲ್ಲ ಎನ್ನುವುದು ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.